## ಅಂಗೈಯಲ್ಲಿ ಅರಮನೆ

### ಆಧಾರ್

ಅಕ್ಕ ಹೇಳಿದ ಘಟನೆ. ಶಿಕ್ಷಕಿಯಾದ ಅಕ್ಕ, ಒಮ್ಮೆ ಯಾವುದೋ ದಾಖಲೆ ಕೆಲಸಕ್ಕೆ ತರಗತಿಯ ವಿದ್ಯಾರ್ಥಿಗಳಿಗೆ, 'ನಾಳೆ ಎಲ್ಲರೂ ಬ್ಯಾಗಲ್ಲಿ ಆಧಾರ್ ಇಟ್ಕೊಂಡು ಬನ್ನಿ' ಎಂದು ಹೇಳಿದರಂತೆ. ಮರುದಿನ ಎಲ್ಲರೂ ತಂತಮ್ಮ ಆಧಾರ್ ಕಾರ್ಡ್ ಕೊಟ್ಟರಂತೆ. ಒಬ್ಬ ಹುಡುಗಿ ಮಾತ್ರ ಸಣ್ಣ ಚಿಟ್ಟಿಯಲ್ಲಿ ಊದಿನಕಡ್ಡಿಯ ಬೂದಿ ಕಟ್ಟಿಕೊಂಡು ಬಂದಿದ್ದಳಂತೆ. 'ತಗೋರಿ ಟೀಚರ್, ಆದಾರ ಹಚ್ಚಿಕೋರಿ' ಅಂದಳಂತೆ. ಉತ್ತರಕರ್ನಾಟಕದ ಕಡೆ ದೇವರ ಹತ್ತಿರ ಹಚ್ಚಿದ ಊದಿನಕಡ್ಡಿ ಬೂದಿಗೆ ಆದಾರ ಎನ್ನುತ್ತಾರೆ. ಹುಡುಗಿ ಅದನ್ನೇ ತಂದು ಟೀಚರ್ ಮುಂದೆ ಹಿಡಿದಾಗ ಅವರು ನಕ್ಕು, ಆ ಹುಡುಗಿಯ ಸಮಾಧಾನಕ್ಕೆ ಅದನ್ನು ಹಚ್ಚಿಕೊಂಡು, 'ನಾಳೆ ಬರುವಾಗ ಆಧಾರ್ ಕಾರ್ಡ್ ತಗೊಂಡು ಬಾ...' ಎಂದು ಕಾರ್ಡ್ ತೋರಿಸಿ ಹೇಳಿದರಂತೆ.



**ನರಸಿಂಹಾರೆಡ್ಡಿ ಯಂಕಾಮೋಳ**



### ಹನುಮಾನ್... ಕಿ... ರಾಣಿ

ಪಕ್ಕದ ಮನೆಯ ಚಿಂಟುಗೆ ಕರೆದು, ಹನುಮಾನ್ ಕಿರಾಣಿ ಅಂಗಡಿಯಿಂದ ಶುಂಠಿ, ಲವಂಗ ತರಲು ಹೇಳಿದೆ. ಎರಡೇ ನಿಮಿಷದಲ್ಲಿ ಮನೆಯಿಂದ ಅಂಗಡಿ ಸಿಗುತ್ತದೆ. ಆದರೆ, ಇವನು ಹೋಗಿ 20 ನಿಮಿಷ ಆದರೂ ಪತ್ತೆ ಇಲ್ಲಾ. ನನಗೆ ಸ್ವಲ್ಪ ಗಾಬರಿಯಾಗತೊಡಗಿತು. ಅಷ್ಟರಲ್ಲಿ ಅವನು ಏದುಸಿರು ಬಿಡುತ್ತಾ ಬಂದು, 'ಆಂಟೀ, ರಸ್ತೆಯ ಆ ತುದಿಯಿಂದ ಈ ತುದಿತನಕ ಎರಡೆರಡು ಸಲ ನೋಡಿದೆ. ನೀವು ಹೇಳಿದ ಅಂಗಡಿ ಇರಲಿಲ್ಲಾ. ಆದರೆ, ಹನುಮಾನ್ ಕಿ ರಾಣಿ ಅಂಗಡಿ ಇತ್ತು' ಎಂದ. ಅಚ್ಚರಿಯಾಯಿತು. ಕೊಂಚ ತಲೆ ಓಡಿಸಿದಾಗ ತಿಳಿಯಿತು. ಈಗ ತಾನೆ ಅಲ್ಪ ಸ್ವಲ್ಪ ಕನ್ನಡ ಓದಲು ಕಲಿತಿದ್ದ ಚಿಂಟುವಿನ ಬಾಯಿಯಲ್ಲಿ 'ಹನುಮಾನ್ ಕಿರಾಣಿ ಅಂಗಡಿ' 'ಹನುಮಾನ್ ಕಿ... ರಾಣಿ...' ಆಗಿತ್ತು.

**ಜಯಮಾಲಾ ಪೈ**